# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಮಾನವಶಾಸ್ತ್ರ ಅಧ್ಯಯನ ವಿಭಾಗ

ಪಾಕ್ಷಿಕ ಮಾತು–08

# ಮಹಿಳಾ ಮತ್ತು ಮಕ್ಕಳ ಆರೈಕೆಯಲ್ಲಿ ಪೋಷಕರ ಪಾತ್ರ

ವಿಶೇಷ ಉಪನ್ಯಾಸ – 16.01.2025

**ಮಹಿಳೆ ಮತ್ತು ಮಕ್ಕಳ ಆರೋಗ್ಯವೇ ಸಂಪತ್ತು – ಡಾ. ರಾಜರಾಜೇಶ್ವರಿ :** ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಕನ್ನಡ ವಿ.ವಿ., ವಿದ್ಯಾರಣ್ಯ

ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದಲ್ಲಿ ದಿನಾಂಕ 16.01.2025ರಂದು ಬೆಳಿಗ್ಗೆ 11.30ಕ್ಕೆ ನಡೆದ ಪಾಕ್ಷಿಕ ಮಾತು ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಆರೈಕೆಯಲ್ಲಿ ಪೋಷಕರ ಪಾತ್ರ ವಿಷಯ ಕುರಿತು ವಿಶೇಷ ಉಪನ್ಯಾಸವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ **ಡಾ.ರಾಜರಾಜೇಶ್ವರಿ** ಅವರು ನೀಡಿದರು.

ಮಹಿಳೆ ಮತ್ತು ಮಕ್ಕಳ ಆರೋಗ್ಯವೇ ಸಂಪತ್ತು ಎಂದರು. ಕೌಟುಂಬಿಕ ಕಲಹಗಳು ಇತ್ತೀಚೆಗೆ ತೀವ್ರವಾಗುತ್ತಿವೆ. ಇಂದು ಕೆಲ ಮಹಿಳೆಯರು ಮತ್ತು ಮಕ್ಕಳು ಅಪೌಷ್ಠಿಕತೆ, ರಕ್ತಹೀನತೆ, ಹಸಿವು, ಚರ್ಮರೋಗ, ಶೀತಜ್ವರ, ನೆಗಡಿ, ಕೆಮ್ಮು, ಮಾನಸಿಕ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಸರಿಯಾದ ಸಮಯದಲ್ಲಿ ಸರಿಯಾದ ಚಿಕಿತ್ಸೆ ಪಡೆದಾಗ ಇವೆಲ್ಲ ಉಪಶಮನವಾಗುತ್ತವೆ. ನಾವು ತಿನ್ನುವ ಆಹಾರದ ಮೇಲೆ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದೆಂದರು. ಹಾಗಾಗಿ ತರಕಾರಿ, ವಿವಿಧ ಸೊಪ್ಪುಗಳು, ಮೊಳಕೆ ಹೊಡೆದ ಕಾಳುಗಳ ಸೇವೆ, ಮಜ್ಜಿಗೆ, ಮೊಸರು, ಹಣ್ಣು ಹಂಪಲುಗಳು, ರಾಗಿ, ಜೋಳದಿಂದ ಸಿದ್ಧಪಡಿಸಿದ ರೊಟ್ಟಿ, ಮುದ್ದೆ ತಿನ್ನುವುದರ ಮೂಲಕ ನಮ್ಮ ಆರೋಗ್ಯವನ್ನು ನಾವು ಹಿಡಿತದಲ್ಲಿಟ್ಟುಕೊಳ್ಳಬಹುದೆಂದು ತಿಳಿಸಿದರು. ಯಾವ ವೈದ್ಯರು ಕೆಟ್ಟವರಲ್ಲ. ರೋಗಿಯ ಆರೋಗ್ಯ, ಮಿತಿ ಮೀರಿದಾಗ ನಾವು ಏನು ಮಾಡಲು ಸಾಧ್ಯವಿಲ್ಲ. ಯಾವುದೇ ರೋಗ ಬಂದಾಗ ತಕ್ಷಣ ನಾವು ವೈದ್ಯರನ್ನು ಸಂಪರ್ಕಿಸಬೇಕೆಂದು ತಿಳಿ ಹೇಳಿದರು. ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಮತ್ತು ಮಹಿಳೆಯರು, ಪೌಷ್ಠಿಕ ಆಹಾರ ಸೇವೆಸುವುದರಿಂದ ಅವರ ದೇಹ ಸದೃಢವಾಗುತ್ತದೆಂದು ತಿಳಿಸಿದರು.

ಮಾನವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ **ಡಾ. ತಾರಿಹಳ್ಳಿ ಹನುಮಂತಪ್ಪ** ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರಾದ ಡಾ.ಎಲ್.ಶ್ರೀನಿವಾಸ ಅವರು ಎಲ್ಲರನ್ನು ಸ್ವಾಗತಿಸಿದರು. ಯೋಗ ಅಧ್ಯಯನದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಂಚಾಲಕರಾದ **ಡಾ. ಶಿವರಾಜ ಎಸ್**. ವಂದಿಸಿದರು.



ಮಹಿಳಾ ಮತ್ತು ಮಕ್ಕಳ ಆರೈಕೆಯಲ್ಲಿ ಪೋಷಕರ ಪಾತ್ರ ವಿಷಯದ ಕುರಿತು ಹಮ್ಮಿಕೊಂಡಿದ್ದ ಪಾಕ್ಷಿಕ ಮಾತು–08 ಕಾರ್ಯಕ್ರಮದಲ್ಲಿ ವಿಚಾರ ಮಂಡಿಸುತ್ತಿರುವ ಡಾ. ರಾಜರಾಜೇಶ್ವರಿ ಅವರು.

**ಮಾನವಶಾಸ್ತ್ರ ವಿಭಾಗ**

**ಕನ್ನಡ ವಿಶ್ವವಿದ್ಯಾಲಯ ಹಂಪಿ**

ವಿದ್ಯಾರಣ್ಯ – ೫೮೩. ೨೭೬

## ಪಾಕ್ಷಿಕ ಮಾತು – ೦೮

**ವಿಶೇಷ ಉಪನ್ಯಾಸ**

**ವಿಷಯ**

## "ಮಹಿಳಾ ಮತ್ತು ಮಕ್ಕಳ ಆರೈಕೆಯಲ್ಲಿ ಪೋಷಕರ ಪಾತ್ರ"

**ವಿಷಯ ಮಂಡನೆ**

**ಡಾ. ರಾಜರಾಜೇಶ್ವರಿ**

ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ

ಕನ್ನಡ ವಿಶ್ವವಿದ್ಯಾಲಯ. ಹಂಪಿ

ದಿನಾಂಕ: ೧೬.೦೧.೨೦೨೫ ಬೆಳಿಗ್ಗೆ – ೧೧.೦೦ಕ್ಕೆ

ಸ್ಥಳ: **ಮಾನವಶಾಸ್ತ್ರ ವಿಭಾಗ**

**ಸರ್ವರಿಗೂ ಸುಸ್ವಾಗತ**

**ಡಾ. ವಿಜಯ್ ಪೂಣಚ್ಚ ತಂಬಂಡ**
ಮಾನ್ಯ ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಎಲ್. ಶ್ರೀನಿವಾಸ**
ಮುಖ್ಯಸ್ಥರು, ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಶಿವರಾಜ ಎಸ್,**
**ಪಿ.ಡಿ.ಎಫ್ ಸಂಶೋಧನಾರ್ಥಿ, ಸಂಚಾಲಕರು,**
ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ. ಹಂಪಿ